**2 ನೇ ಆಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ**

**ಸತ್ರ ಮೊಕದ್ದಮೆ ಸಂಖ್ಯೆಃ18/2022**

ಪಿ.ಡಬ್ಲುಃ **10** ಸಿಡಬ್ಲುಃ **14**

ಸಾಕ್ಷಿಯ ಹೆಸರು : ಸಾದಿಕ್

ತಂದೆ ಹೆಸರು : ಎಂ. ಡಿ . ಗೌಸ

ವಯಸ್ಸು : **34** ವರ್ಷ

ವೃತ್ತಿ : ಟೈಲರ್ ಕೆಲಸ

ವಾಸಸ್ಥಳ : ಬಳ್ಳಾರಿ

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ **16-11-2022**

ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದಃ-

ನಮ್ಮ ಮನೆ ಬಳ್ಳಾರಿಯ ಮಿಲ್ಲರ್ ಪೇಟೆಯಲ್ಲಿ ಬರುತ್ತದೆ . ಚಾಸಾ-**1** ಮತ್ತು **8** ರಿಂದ **13** ರವರು ಗೊತ್ತು . ಚಾಸಾ-**1** ರವರ ಮನೆ ಮಿಲ್ಲರ್ ಪೇಟೆಯಲ್ಲಿ ಇರುತ್ತದೆ . ಚಾಸಾ-**1** ರವರು ಗ್ರಾಮ ಲೆಕ್ಕಾಧಿಕಾರಿ . ಆರೋಪಿತರೆಲ್ಲರೂ ಪರಿಚಯವಿರುತ್ತಾರೆ ಅವರು ಸಹ ನಮ್ಮ ಮನೆಯ ಹತ್ತಿರ ಇರುತ್ತಾರೆ .

ದಿಃ **01-12-2021** ರಂದು ರಾಃ **8-00** ಗಂಟೆಯಿಂದ **8-30** ರ ಸಮಯದಲ್ಲಿ ನಾನು ಮತ್ತು ಚಾಸಾ-**16** ರವರು ಅಲ್ಲೇ ಬಷೀರ್ ಅವರ ಹಿಟ್ಟಿನ ಗಿರಣಿ ಹತ್ತಿರ ಮಾತನಾಡುತ್ತಾ ನಿಂತಾಗ **8-00** ಗಂಟೆ **10** ನಿಮಿಷಕ್ಕೆ ಆರೋಪಿತರೆಲ್ಲಾ ಓಡಿ ಬಂದು ಚಾಸಾ-**1** ರವರ ಮನೆಯ ಹತ್ತಿರ ಹೋದರು . ಆಗ ಗಲಾಟೆಯಾಗುವ ಶಬ್ದ ಕೇಳಿ ನಾವು ವೆಂಕಟಸ್ವಾಮಿ ಮನೆಯ ಹತ್ತಿರ ಹೋದೆವು . **1** ನೇ ಆರೋಪಿಯೂ ಚಾಸಾ-**1** ರವರಿಗೆ ನಮ್ಮ ಗಾಡಿಗಳನ್ನು ಹೇಗೆ ಹಿಡಿಯುತ್ತೀಯಾ ಎಂದು ಬೈಯುತ್ತಿದ್ದನು . ಆಗ ಚಾಸಾ-**1** ರವರು ಹೊರಗೆ ಬಂದಾಗ **1** ನೇ ಆರೋಪಿಯೂ ಚಾಸಾ-**1** ರವರಿಗೆ ಮಚ್ಚುಗತ್ತಿಯಿಂದ ಹೊಡೆಯಲು

ಹೋದನು . ಅದನ್ನು ತಡೆಯಲು ಹೋದ ಚಾಸಾ-1 ರವರ ಹೆಂಡತಿ ಚಾಸಾ-8 ಮತ್ತು ಮಗ ಚಾಸಾ9 ರವರ ಬಲಗೈಗಳಿಗೆ ಮಚ್ಚುಗತ್ತಿಯಿಂದ ಗಾಯವಾಯಿತು . ಇಲಿಯಾಸ್, ತೌಸೀಫ್ , ರಫೀಕ್ ಮತ್ತು ಮಕ್ಬುಲ್ ಇವರು ಮಚ್ಚುಗತ್ತಿಗಳನ್ನು ತೆಗೆದುಕೊಂಡು ಚಾಸಾ-1 ರವರಿಗೆ ಹೊಡೆಯಲು ಹೋದರು. ಮಚ್ಚುಗತ್ತಿಯಿಂದ ಚಾಸಾ-1 ರವರ ಎಡಗೈನ ಹೆಬ್ಬೆರಳು ಮತ್ತು ತೋರ್ ಬೆರಳಿನ ಮಧ್ಯದಲ್ಲಿ ಗಾಯವಾಯಿತು . ಅಲ್ಲೆ ಇದ್ದ ತಸ್ಲಿಮ್, ಸೈನಾಜ್ , ಗೌಸಿಯಾ ಇವರು ಚಾಸಾ-8 ರವರಿಗೆ ಕೈಗಳಿಂದ ಹೊಡೆದರು . ನಂತರ ನಾವೆಲ್ಲಾ ವೆಂಕಟಸ್ವಾಮಿಯನ್ನು ವಿಮ್ಸ್ ಆಸ್ಪತ್ರೆಗೆ ಕರೆದುಕೊಂಡು ಹೋದೆವು . ಸಾಕ್ಷಿಯೂ ಮು.ಮಾ-1 ರಿಂದ 6 ರನ್ನು ನೋಡಿ ಗುರುತಿಸಿರುತ್ತಾರೆ . ನ್ಯಾಯಾಲಯದ ಮುಂದೆ ಹಾಜರಿರುವ 1, 3, 4, 6 ರಿಂದ 12 ನೇ ಆರೋಪಿತರನ್ನು ಸಾಕ್ಷಿಯೂ ನೋಡಿ ಗುರುತಿಸಿರುತ್ತಾರೆ . 2 ಮತ್ತು 5 ನೇ ಆರೋಪಿತರು ಗೈರು ಹಾಜರು ಇರುವುದರಿಂದ ಆರೋಪಿ ಪರ ವಕೀಲರು ಸದರಿ ಆರೋಪಿತರನ್ನು ಗುರುತಿಸುವಿಕೆಯಲ್ಲಿ ತಕರಾರು ಇರುವುದಿಲ್ಲ ಎಂದು ವಿನಂತಿಸಿಕೊಂಡಿರುತ್ತಾರೆ .

<u>ಪಾಟೀಸವಾಲು ಆರೋಪಿತರ ಪರವಾಗಿ ಶ್ರೀ ಬಿ ವಿ ಬಿ ವಕೀಲರಿಂದಃ</u>

ರಿಜ್ವಾನ್ ನನ್ನ ಅಕ್ಕ . ಅಜಿಮ್ ನನ್ನ ದೊಡ್ಡ ಅಣ್ಣ. ನಾವೆಲ್ಲರೂ ಟೈಲರ್ ಕೆಲಸ ಮಾಡುತ್ತೇವೆ . ನಾವು ಚಾಸಾ-13 ರವರ ಹತ್ತಿರ ಕೆಲಸ ಮಾಡುತ್ತೇವೆ ಎಂದರೆ ಮೊದಲು ಮಾಡುತ್ತಿದ್ದೆವು ಈಗ ಇಲ್ಲ . ನಾವು 8-10 ವರ್ಷಗಳ ವರೆಗೆ ಚಾಸಾ-13 ರವರ ಹತ್ತಿರ ಕೆಲಸ ಮಾಡಿರುತ್ತೇವೆ ಎಂದರೆ ಸರಿ . ನಾವು ಕೆಲಸ ಮಾಡುವ ಸಮಯದಲ್ಲಿ ಚಾಸಾ-13 ರವರಿಂದ ಮುಂಗಡ ಹಣ ಪಡೆದು ಜೀವನ ನಡೆಸುತ್ತಿದ್ದೆವು ಎಂದರೆ ಸರಿ . ರಾಘವೇಂದ್ರ ನಾವು ಬೇರೆ ಕಡೆ ಟೈಲರ್ ಕೆಲಸ ಮಾಡುತ್ತಿರುವುದರಿಂದ ಪರಿಚಯ . ಚಾಸಾ-16 ರವರ ಮನೆ ವೆಂಕಟರಮಣ ಕಾಲೋನಿಯಲ್ಲಿ ಇರುತ್ತದೆ . ಸದರಿ ಕಾಲೋನಿ ರೂಪನಗುಡಿ ರಸ್ತೆಯಲ್ಲಿ ಬರುತ್ತದೆ ಎಂದರೆ ಸರಿ .

ಬಷಿರ್ ಹಿಟ್ಟಿನ ಗಿರಣಿ ಮತ್ತು ರೂಪನಗುಡಿ ರಸ್ತೆಗೆ **5-6** ಕಿ . ಮೀಟರ್ ದೂರ ಆಗುತ್ತದೆ ಎಂದರೆ **2** ಕಿ . ಮೀಟರ್ ಆಗುತ್ತದೆ . ರಾಘವೇಂದ್ರ ಚಾಸಾ-**1** ರವರ ಹೆಂಡತಿಯ ತಮ್ಮ ಎಂದರೆ ಸರಿ . ಮಾರುತಿಯೂ ಸಹ ವೆಂಕಟಸ್ವಾಮಿ ಹೆಂಡತಿಯ ದೊಡ್ಡ ತಮ್ಮ . ರಾಘವೇಂದ್ರ ಮತ್ತು ನಾನು ಯಾವುದೇ ವ್ಯವಹಾರ ಮಾಡುವುದಿಲ್ಲ ಎಂದರೆ ಸರಿ . ನಮ್ಮ ಮನೆ ಹಿಟ್ಟಿನ ಗಿರಣಿಯ ಪಕ್ಕದಲ್ಲಿ ಇರುತ್ತದೆ ಎಂದರೆ ಸರಿ . ಹಿಟ್ಟಿನ ಗಿರಣಿಯೂ ಕೋರ್ಟ್ ಮೊಹಲಾ ರಸ್ತೆಯ ಕಡೆ ಬರುತ್ತದೆ ಎಂದರೆ ಸರಿ .

ಚಾಸಾ-**1** ರವರ ಮನೆಯಲ್ಲಿ ಅವರ ಅಕ್ಕ ರೇಣುಕಾ ಇರುತ್ತಾರೆ ಎಂದರೆ ಸರಿ . ಚಾಸಾ-**1** ರವರ ಮನೆ ರೂಪನಗುಡಿ ರಸ್ತೆಯಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ . ನಾನು ರಾಘವೇಂದ್ರ ಜೊತೆಗೆ ನಮ್ಮ ವೈಯಕ್ತಿಕ ವಿಚಾರಗಳನ್ನು ಮಾತನಾಡುವುದಿಲ್ಲ ಎಂದರೆ ಸರಿ. ಮಿಲ್ಲರ ಪೇಟೆಯಲ್ಲಿ ಇರುವ ರೇಣುಕಮ್ಮನ ಮನೆಯ ಸಂದಿ ಬೇರೆ ಎಂದರೆ ಸರಿ . ರೇಣುಕಮ್ಮನ ಮನೆಗೂ ಬಷೀರ್ ಹಿಟ್ಟಿನ ಗಿರಣಿಗೂ **2** ಕಿ . ಮೀಟರ್ ದೂರ ಇರುತ್ತದೆ ಎಂದರೆ **10** ಹೆಜ್ಜೆ ಆಗುತ್ತದೆ ನಂತರ ಸಾಕ್ಷಿಯೂ **2** ಪಾರ್ಲಾಂಗ್ ಆಗುತ್ತದೆ ಎಂದು ವಿವರಿಸುತ್ತಾನೆ . ಬಷೀರ್ ಹಿಟ್ಟಿನ ಗಿರಣಿಯಿಂದ ರೇಣುಕಮ್ಮನ ಮನೆಯೂ ಕಾಣುವುದಿಲ್ಲ ಎಂದರೆ ಸರಿ .

ಆರೋಪಿತರಲ್ಲರೂ ಚಾಸಾ-**1** ರವರ ಮನೆ ಕಡೆ ಓಡಿ ಹೊರಟ್ಟಿದ್ದರು ಎಂದು ನಾನು ಪೊಲೀಸರ ಮುಂದೆ ಕೊಟ್ಟ ಹೇಳಿಕೆಯಲ್ಲಿ ಬರೆಸಿಲ್ಲ ಎಂದರೆ ಸರಿ . ರೇಣುಕಮ್ಮನ ಮನೆಯೂ ಕಿರಿದಾದ ಸಂದಿ ಎಂದರೆ ಸರಿ . ರೇಣುಕಮ್ಮನ ಮನೆಗೆ ಗೇಟ್ ಮತ್ತು ಕಾಂಪೌಂಡ್ ಇರುತ್ತದೆ ಎಂದರೆ ಸರಿ . ಗಲಾಟೆಯೂ ಮನೆಯ ಒಳಗಡೆ ಆಗಿರುತ್ತದೆ . ಮನೆಯ ಮುಂದೆ **2 -3** ಅಡಿ ಜಾಗ ಇದೆ ನಂತರ ಗೇಟ್ ಇರುತ್ತದೆ ಎಂದರೆ ಸರಿ . ಕಿರಿದಾದ ಓಣಿ ಮತ್ತು ಕಿರಿದಾಗ ಕಾಂಪೌಂಡ್ ಇದ್ದಾಗ **40-51** ಜನ ಹಿಡಿಸಲು ಸಾಧ್ಯವಿಲ್ಲ

ಎಂದರೆ ರಸ್ತೆಯಲ್ಲಿ ಇದ್ದರು . ನಾವು ಸ್ಥಳದಲ್ಲಿ ಹೋದಾಗ **40-50** ಜನ ಸೇರಿದ್ದರು . **40-50** ಜನ ಗಲಾಟೆ ಮಾಡುತ್ತಿದ್ದರಾ ಹೇಗೆ ಎಂದರೆ ಬೈಯುತ್ತಿದ್ದರು . ನಾನು **40 -50** ಜನ ಹಿಂದುಗಡೆ ಇದ್ದೆನು ಎಂದರೆ ನಂತರ ನಾನು ಮುಂದುಗಡೆ ಓಡಿ ಹೋಗಿ ಜಗಳ ಬಿಡಿಸಿರುತ್ತೇನೆ .

**1** ನೇ ಆರೋಪಿಯೂ ಚಾಸಾ-**1** ರವರಿಗೆ ನಮ್ಮ ಗಾಡಿಗಳನ್ನು ಹೇಗೆ ಹಿಡಿಯುತ್ತೀಯಾ ಎಂದು ಬೈಯುತ್ತಿದ್ದನು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನಾನು **1** ನೇ ಆರೋಪಿ ಮಚ್ಚು ಗತ್ತಿಯಿಂದ ಚಾಸಾ-**8 , 9** ಮತ್ತು **1** ರವರಿಗೆ ಹೊಡೆಯುವುದನ್ನು ಕಣ್ಣಾರೆ ನೋಡಿಲ್ಲ ಎಂದರೆ ಸರಿಯಲ್ಲ . ಇಲಿಯಾಸ್ , ರಫೀಕ್ , ತೌಸಿಫ್ ಮತ್ತು ಮುಕ್ ಬಲ್ ಇವರು ಮಚ್ಚು ಗತ್ತಿಯಿಂದ ಚಾಸಾ-**1** ರವರಿಗೆ ಹೊಡೆಯುವುದನ್ನು ಮತ್ತು ಆತನ ಕೈಗೆ ಗಾಯಪಡಿಸಿದರು ಎನ್ನುವುದನ್ನು ನಾನು ನೋಡಿಲ್ಲ ಮತ್ತು ಈ ವಿಷಯವಾಗಿ ಪೂಲೀಸರ ಮುಂದೆ ಹೇಳಿಲ್ಲ ಎಂದರೆ ಸರಿಯಲ್ಲ . ಆರೋಪಿ **8** ರಿಂದ **12** ರವರು ಚಾಸಾ-**8** ರವರಿಗೆ ಹಲ್ಲೆ ಮಾಡುವುದನ್ನು ನಾನು ನೋಡಿಲ್ಲ ಎಂದರೆ ಸರಿಯಲ್ಲ . ಮು.ಮಾ-**1** ರಿಂದ **6** ರ ಆಯುದಗಳು ಯಾರಾರ ಕೈಯಲ್ಲಿ ಇದ್ದವು ಎಂದು ನನಗೆ ಹೇಳಲು ಆಗುವುದಿಲ್ಲ ಎಂದರೆ ಕತ್ತಲು ಇತ್ತು , ನನಗೆ ಗೊತ್ತಾಗಿರುವುದಿಲ್ಲ . ಮು.ಮಾ-**1** ರಿಂದ **6** ರ ವಸ್ತುಗಳನ್ನು ಈ ದಿನ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿ . ನನಗೆ ಯಾವ ವಿಷಯ ಗೊತ್ತಿಲ್ಲದೆ ಇದ್ದರೂ ಸಹ ಚಾಸಾ-**13** ರವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

ಮಹಾನಗರ ಪಾಲಿಕೆಯ ಚುನಾವಣೆಯಲ್ಲಿ ಮಾರುತಿಯ ವಿರುದ್ಧ ಇಬ್ರಾಹಿಂ ಬಾಬು ಸ್ಪರ್ದೆ ಮಾಡಿದ್ದ ಎಂದರೆ ಸರಿ . ಮಾರುತಿಯೂ ಚಾಸಾ-**13** ರವರ ಹೆಂಡತಿಯ ಸಂಬಂದಿಕ ಎಂದರೆ ನನಗೆ ಗೊತ್ತಿಲ್ಲ . ಆ ಚುನಾವಣೆಯಲ್ಲಿ ನಾನು , ಚಾಸಾ-**13** ರವರು ಮಾರುತಿಗೆ ಸಹಾಯ ಮಾಡಿದ್ದೇವೆ ಎಂದರೆ ಸರಿಯಲ್ಲ . ಆ ಚುನಾವಣೆಯಲ್ಲಿ ಇಬ್ರಾಹಿಂ

ಗೆದ್ದಿರುತ್ತಾನೆ ಎಂದರೆ ಸರಿ . ಚುನಾವಣೆ ದ್ವೇಷದ ಹಿನ್ನೆಲೆಯಲ್ಲಿ ಚಾಸಾ-13 ರವರ ಮಾತು ಕೇಳಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

ಮರುವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ.